
THE MICE THAT ATE IRON

TALES FROM PANCHTANTRA

ಕಬ್ಬಿಣ ತಿಂದ ಇಲಿ
ಪಂಚತಂತ್ರ ಕಥೆಗಳಿಂದ

KANNADA: Dr. K. Sreepathi



The Mice that Ate Iron

ಕಬ್ಬಿಣ ತಿಂದ ಇಲಿ
ಪಂಚತಂತ್ರ ಕಥೆಗಳಿಂದ

KANNADA: Dr. K. Sreepathi




Tales from Panchatantra

Once upon a time, there was a wealthy merchant named Naduk. Naduk however suffered a heavy loss in his business and lost a lot of money.

He decided to move to another town and try his luck there.

ಒಂದಾನೊಂದು ಕಾಲದಲ್ಲಿ ಒಬ್ಬ ಶ್ರೀಮಂತ ವರ್ತಕನಿದ್ದ. ಅವನ ಹೆಸರು ನಾಡುಕ್. ಒಮ್ಮೆ ಅವನು ವ್ಯಾಪಾರದಲ್ಲಿ ನಷ್ಟ ಅನುಭವಿಸಿ ಬಹಳ ಹಣವನ್ನು ಕಳೆದುಕೊಂಡ.

ಆಗ ಅವನು ಬೇರೆ ಪಟ್ಟಣಕ್ಕೆ ಹೋಗಿ ಅಲ್ಲಿ ಅದೃಷ್ಟ ಪರೀಕ್ಷಿಸಲು ಯೋಚಿಸಿದ.




Before leaving, Naduk went to meet his friend Lakshman.

He wanted to leave an iron beam with Lakshman as transporting the beam to another town would be very difficult.

ಹೋಗುವ ಮೊದಲು ನಾಡುಕ್ ಅವನ ಸ್ನೇಹಿತ ಲಕ್ಷ್ಮಣನನ್ನು ಭೇಟಿಯಾದ.


ನಾಡುಕ್ ನ ಬಳಿ ಒಂದು ಕಬ್ಬಿಣದ ಸರಳು ಇತ್ತು. ಅದನ್ನು ಬೇರೆ ಊರಿಗೆ ಒಯ್ಯಲು ಕಷ್ಟವಾದ್ದರಿಂದ ಅದನ್ನು ಲಕ್ಷ್ಮಣನ ಬಳಿ ಇಟ್ಟು ಹೋಗಲು ಯೋಚಿಸಿದ.



“Fear not friend,” said Lakshman. “Your beam will be safe with me and you may take it whenever you want.”

Naduk thanked Lakshman for his kindness and left.

ಲಕ್ಷಣ ಹೇಳಿದ , “ಏನೂ ಚಿಂತಿಸಬೇಡ, ನಿನ್ನ ಕಬ್ಬಿಣದ ಸರಳು ನನ್ನ ಬಳಿ ಸುರಕ್ಷಿತವಾಗಿ ಇರುತ್ತದೆ. ನಿನಗೆ ಬೇಕಾದಾಗ ಬಂದು ಅದನ್ನು ನನ್ನಿಂದ ತೆಗೆದುಕೊಂಡು ಹೋಗಬಹುದು”



A few years went by and Naduk's business flourished. He grew wealthy once again and decided to move back to his old town.

He bought a huge mansion there and hired several servants to take care of his house.



ಕೆಲವು ವರ್ಷಗಳು ಉರುಳಿದವು. ಪರ ಊರಿನಲ್ಲಿ ನಾಡುಕ್ ನ ವ್ಯಾಪಾರ ವೃದ್ಧಿಸಿತು. ಅವನು ಮತ್ತೆ ಶ್ರೀಮಂತನಾದ. ತನ್ನ ಊರಿಗೆ ಹಿಂತಿರುಗಲು ಯೋಚಿಸಿದ.

ತನ್ನ ಊರಿನಲ್ಲಿ ದೊಡ್ಡ ಬಂಗಲೆ ಖರೀದಿಸಿ ಹಲವಾರು ಸೇವಕರನ್ನು ಮನೆಯಲ್ಲಿ ಕೆಲಸ ಮಾಡಲು ನೇಮಿಸಿಕೊಂಡ.



After a few days Naduk decided to go and meet Lakshman. Lakshman was very glad to see his friend.

He was also happy about Naduk's successful business. The two chatted for quite a while about various affairs.



ಕೆಲವು ದಿನಗಳ ನಂತರ ನಾಡುಕ್ ತನ್ನ ಗೆಳೆಯ ಲಕ್ಷ್ಮಣ ನನ್ನು ಭೇಟಿಯಾಗಲು ಹೋದ. ಲಕ್ಷ್ಮಣನಿಗೆ ನಾಡುಕ್ ನನ್ನು ನೋಡಿ ತುಂಬಾ ಸಂತೋಷವಾಯಿತು.

ನಾಡುಕ್ ನ ವ್ಯಾಪಾರ ಚಿನ್ನಾಗಿ ನಡೆಯುತ್ತಿರುವುದನ್ನು ತಿಳಿದು ಇನ್ನೂ ಸಂತೋಷವಾಯಿತು. ಇಬ್ಬರೂ ಸ್ವಲ್ಪ ಹೊತ್ತು ಹಲವಾರು ವಿಚಾರಗಳ ಕುರಿತು ಹರಟೆ ಹೊಡೆದರು.




Finally before leaving Naduk said to Lakshman, "Before leaving I had given you an iron beam to keep for me. Now that I am back, may I have it?"

On hearing this Lakshman turned red and looked very worried. He had planned to sell the beam as it would fetch a good price in the market.

ಹಿಂತಿರುಗುವಾಗ ನಾಡುಕ್ ಲಕ್ಷ್ಮಣ್ ನಿಗೆ ಹೇಳಿದ " ನಾನು ಹೊರಡುವ ಮೊದಲು ನಿನಗೆ ಒಂದು ಕಬ್ಬಿಣದ ಸರಳನ್ನು ಜೋಪಾನವಾಗಿ ಇಟ್ಟುಕೊಂಡಿರು ಎಂದು ಹೇಳಿ ಕೊಟ್ಟಿದ್ದೆ. ಅದನ್ನು ಈಗ ಹಿಂದಿರುಗಿ ಕೊಡುವೆಯಾ ?"


ಇದನ್ನು ಕೇಳಿ ಲಕ್ಷ್ಮಣನಿಗೆ ಯೋಚನೆಯಾಯಿತು. ಅವನ್ನು ಅದನ್ನು ಮಾರಾಟ ಮಾಡಲು ಯೋಚಿಸಿದ್ದ. ಅದಕ್ಕೆ ಮಾರುಕಟ್ಟೆಯಲ್ಲಿ ಒಳ್ಳೆಯ ಬೆಲೆ ಸಿಗುತ್ತಿತ್ತು.





"Oh! The beam you say? Oh! The thing is, I have had some mice in the basement this year.

"It is very unfortunate, but these pesky mice ate your iron beam until it was all gone!" stuttered Lakshman.




“ಓ ಅದಾ, ಕಬ್ಬಿಣದ ಸರಳು ತಾನೆ? ಅದೇನಾಯ್ತುಂದ್ರೆ, ನೆಲಮಾಳಿಗೆಯ ಲ್ಲಿ ಕೆಲವು ಇಲಿಗಳು ಸೇರಿಕೊಂಡಿವೆ.”

“ ದುರದೃಷ್ಟಕ್ಕೆ ಈ ಹಾಳು ಇಲಿಗಳು ನಿನ್ನ ಕಬ್ಬಿಣದ ಸರಳನ್ನು ಪೂರ್ತಿಯಾಗಿ ತಿಂದುಬಿಟ್ಟಿವೆ” ಲಕ್ಷ್ಮಣ ಉತ್ತರಿಸಿದ.



On hearing this Naduk was not convinced. But he said to Lakshman, "I am sorry to hear that. Anyway, will you please send your son Ramu home with me. I would like him to collect a present that I have brought you from my travels."



ಈ ಉತ್ತರವನ್ನು ಕೇಳಿ ನಾಡೂಕ್‌ಗೆ ಅವನ ಮಾತಿನಲ್ಲಿ ನಂಬಿಕೆ ಬರಲಿಲ್ಲ. ಆದರೆ ಅವನು ಲಕ್ಷ್ಮಣನಿಗೆ ಹೇಳಿದ "ಓಹೋ ಹೀಗಾಯಿತೇ? ಬಹಳ ಬೇಜಾರಾಯಿತು. ಇರಲಿ, ನಿನ್ನ ಮಗ ರಾಮುನನ್ನು ನನ್ನ ಮನೆಗೆ ಕಳುಹಿಸು ನಿನಗಾಗಿ ನಾನು ಪ್ರಯಾಣದಲ್ಲಿ ತಂದಿರುವ ಉಡುಗೊರೆಯನ್ನು ಕೊಟ್ಟು ಕಳುಹಿಸುತ್ತೇನೆ" ಎಂದ.



Naduk took Ramu with him and locked him in the basement of his house.

After a few hours Lakshman grew worried that his son had not yet returned. He too went to Naduk's house.

ನಾಡುಕ್ ರಾಮುನನ್ನು ತನ್ನ ಮನೆಗೆ ಕರೆದುಕೊಂಡು ಹೋಗಿ ತನ್ನ ನೆಲಮಾಳಿಗೆಯಲ್ಲಿ ಕೂಡಿಹಾಕಿದ.

ಕೆಲವು ಗಂಟೆಗಳ ನಂತರ ಲಕ್ಷ್ಮಣನಿಗೆ ತನ್ನ ಮಗ ಇನ್ನೂ ಬಂದಿಲ್ಲ ಎಂದು ಗಾಬರಿಯಾಯಿತು. ಅವನು ಲಕ್ಷ್ಮಣನ ಮನೆಗೆ ಹೋದ.



"Where is my son?" asked Lakshman.

"On our way here, a hawk carried him off," said Naduk.

The two got into a fierce argument since Lakshman said that it was impossible for a hawk to carry off his son.



ನನ್ನ ಮಗ ಎಲ್ಲಿ ಲಕ್ಷ್ಮಣ್ ಕೇಳಿದ.

"ದಾರಿಯಲ್ಲಿ ಬರುವಾಗ ಒಂದು ಗಿಡುಗ ಅವನನ್ನು ಎತ್ತಿಕೊಂಡು ಹೋಯಿತು" ಎಂದ ನಾಡುಕ್.

ಈ ಮಾತನ್ನು ಕೇಳಿ ಲಕ್ಷ್ಮಣನಿಗೆ ಸಿಟ್ಟು ಬಂತು. ಇಬ್ಬರೂ ಜಗಳ ಪ್ರಾರಂಭಿಸಿದರು. "ಒಬ್ಬ ಹುಡುಗನನ್ನು ಗಿಡುಗ ಎತ್ತಿಕೊಂಡು ಹೋಗಲು ಸಾಧ್ಯವಿಲ್ಲ" ಎಂದ ಲಕ್ಷ್ಮಣ್.



Eventually they went to the local magistrate. The magistrate too said that it was impossible for a hawk to carry off a young boy.

Clever Naduk then said, "If the mice in Lakshman's house can eat away my iron beam, of course a hawk can carry his son!"



ಕಡೆಯಲ್ಲಿ ಅವರಿಬ್ಬರೂ ಪಟ್ಟಣದ ನ್ಯಾಯಾಧೀಶನ ಬಳಿ ಹೋದರು. ಆ ನ್ಯಾಯಾಧೀಶ ಸಹ ಒಂದು ಗಿಡುಗ ಒಬ್ಬ ಹುಡುಗನನ್ನು ಎತ್ತಿಕೊಂಡು ಹೋಗಲು ಸಾಧ್ಯವಿಲ್ಲ ಎಂದೇ ಹೇಳಿದ.


ಬುದ್ಧಿವಂತ ನಾಡುಕ್ ಕೇಳಿದ "ಒಂದು ಇಲಿ ಲಕ್ಷ್ಮಣನ ಮನೆಯಲ್ಲಿ ನನ್ನ ಕಬ್ಬಿಣದ ಸರಳನ್ನು ತಿಂದಿದೆ ಎಂದ ಮೇಲೆ ಒಂದು ಗಿಡುಗ ಅವನ ಮಗನನ್ನು ಎತ್ತಿಕೊಂಡು ಹೋಗುವುದರಲ್ಲಿ ಆಶ್ಚರ್ಯವೇನಿದೆ" ?



On hearing this, the magistrate demanded the whole story. He finally ordered Lakshman to return the iron beam and Naduk to return Lakshman's son.

Lakshman apologized to Naduk for trying to trick him and the two soon became friends once again.

ಇದನ್ನು ಕೇಳಿ ಆಶ್ಚರ್ಯಗೊಂಡ ನ್ಯಾಯಾಧೀಶ "ಪೂರ್ತಿ ವಿಷಯವೇನು?" ಎಂದು ಕೇಳಿದ. ಕಥೆಯನ್ನು ಕೇಳಿದ ಅವನು ಲಕ್ಷ್ಮಣನಿಗೆ ಆ ಕಬ್ಬಿಣದ ಸರಳನ್ನು ಹಿಂದಿರುಗಿಸಲು ಹೇಳಿದ ಮತ್ತು ನಾಡುಕ್‌ಗೆ ಲಕ್ಷ್ಮಣನ ಮಗನನ್ನು ಸಹ ಹಿಂದಿರುಗಿಸಲು ಹೇಳಿದ. ಲಕ್ಷ್ಮಣ್ ನಾಡೋಕ್ ಬಳಿ ಕ್ಷಮೆ ಕೇಳಿದ. ಅವರಿಬ್ಬರೂ ಮತ್ತೆ ಸ್ನೇಹಿತರಾದರು.



ಮುಕ್ತಾಯ